ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ದಕ್ಷಿಣ ಕನ್ನಡ, ಮಂಗಳೂರು.

**ಸೆಷನ್ಸ್ ಕೇಸ್ ನಂಬ್ರ 126/2024**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಶ್ರೀ ಮಹಮ್ಮದ್ ಅಶ್ರಫ್ | ಪ್ರಾಸಾಃ 8 |
| ತಂದೆಯ ಹೆಸರು | : | ಖಾದ್ರಿ ಬ್ಯಾರಿ | ಚಾಸಾಃ 9 |
| ಪ್ರಾಯ | : | 35 ವರ್ಷ | **ದಿನಾಂಕಃ 17.12.2025** ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ಕೂಲಿ ಕೆಲಸ | |
| ವಾಸಸ್ಥಳ | : | ಉನ್ನಾಲು ಮನೆ, ಕೊಯ್ಯೂರು ಗ್ರಾಮ, ಬೆಳ್ತಂಗಡಿ ತಾಲೂಕು. | |

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ**

ನನಗೆ ಚಾಸಾ-10 ರವರ ಪರಿಚಯ ಇದ್ದು ಅವರು ನನ್ನ ಚಿಕ್ಕಮ್ಮನ ಮಗ. ಈ ಪ್ರಕರಣದ ಆರೋಪಿಯನ್ನು ನಾನು ಈ ಹಿಂದೆ ಅವರು ಬಾಡಿಗೆಗೆ ಇದ್ದ ಮನೆಯಲ್ಲಿ ನೋಡಿರುತ್ತೇನೆ. ಸಾಕ್ಷಿ ಸ್ವತ್ತು ಸ್ವಾಧೀನತಾ ಮಹಜರಿನಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು **ನಿಪಿ-11** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-11(ಎ)** ಎಂದು ಗುರುತಿಸಲಾಯಿತು. ನಿಪಿ-11 ಕ್ಕೆ ನಾನು ಸಹಿಯನ್ನು ಕೊಯ್ಯೂರು ಬಳಿ ಇರುವ ರಸ್ತೆಯಲ್ಲಿ ಪೋಲಿಸರು ಬಂದಾಗ ಹಾಕಿರುತ್ತೇನೆ. ಅದರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಸ್ವತ್ತನ್ನು ವಶಪಡಿಸಿಕೊಂಡಿರುವುದಿಲ್ಲ.

2. ಸಾಕ್ಷಿಗೆ ಎರಡು ಪೋಟೋಗಳನ್ನು ತೋರಿಸಲಾಗಿ, ಅದರಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸುತ್ತಾರೆ. ಸದರಿ ಪೋಟೋಗಳನ್ನು **ನಿಪಿ-12(2)** ಎಂದು ಗುರುತಿಸಲಾಯಿತು. ಅದನ್ನು ಆರೋಪಿಯ ವಾಸವಿದ್ದ ಬಾಡಿಗೆ ಮನೆಯಲ್ಲಿ ತೆಗೆದಿರುತ್ತಾರೆ. ಯಾಕಾಗಿ ತೆಗೆಯಲಾಯಿತು ಎಂದು ನನಗೆ ಗೊತ್ತಿಲ್ಲ.

ನಿಪಿ-12 ರಲ್ಲಿ ಆರೋಪಿ ಇದ್ದಾನೋ ಇಲ್ಲವೋ ಎಂದು ನನಗೆ ಗುರುತಿಸಲು ಆಗುವುದಿಲ್ಲ.

3. ತಿಳಿ ಹಸಿರು ಬಣ್ಣದ ಕ್ಲಾತ್ ಮೌಲ್ಡೆಡ್ ಕವರಿನಲ್ಲಿ ಪ್ಯಾಕ್ ಮಾಡಿ ಸೀಲು ಹಾಕಲಾದ ಸ್ವತ್ತನ್ನು ತೆರೆದ ನ್ಯಾಯಾಲಯದಲ್ಲಿ ಅನುಮತಿ ಮೇರೆಗೆ ತೆರೆದು ನೋಡಲಾಗಿ, ಅದರಲ್ಲಿರುವ ಕತ್ತಿಯನ್ನು ಸಾಕ್ಷಿ ಗುರುತಿಸಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ಕವರಿನ ಮೇಲಿರುವ ಅವರ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಕತ್ತಿಯನ್ನು **ಎಂ.ಒ-9** ಎಂದು, ಸಾಕ್ಷಿಯ ಸಹಿಯನ್ನು **ಎಂ.ಒ-9(ಎ)** ಎಂದು ಗುರುತಿಸಲಾಯಿತು. ಪೋಲಿಸರ ಮುಂದೆ ಹೇಳಿಕೆಯನ್ನು ನೀಡಿರುವುದಿಲ್ಲ.

**(ಈ ಹಂತದಲ್ಲಿ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ನ್ಯಾಯಾಲಯದ ಮುಂದಿರುವ ಕಡತ ಮತ್ತು ಸಾಕ್ಷಿಯ ಹೇಳಿಕೆಗಳನ್ನು ಗಮನಿಸಿ, ಸರಕಾರಿ ಅಭಿಯೋಜಕರ ಕೋರಿಕೆಯನ್ನು ಮನ್ನಿಸಿ, ಸಾಕ್ಷಿಯನ್ನು ಪಾಟೀಸವಾಲಿಗೆ ಒಳಪಡಿಸಲು ಅನುಮತಿ ನೀಡಲಾಗಿದೆ. )**

**<u>ಪಾಟೀ ಸವಾಲುಃ ಮಾನ್ಯ ಸರಕಾರಿ ಅಭಿಯೋಜಕರಿಂದಃ</u>**

4. ದಿನಾಂಕ 30.06.2024 ರಂದು ಚಾಸಾ-19 ರವರು ನನ್ನನ್ನು ಮತ್ತು ಚಾಸಾ-10 ರವರನ್ನು ಬೆಳ್ತಂಗಡಿ ಠಾಣೆಗೆ ಬರಮಾಡಿಕೊಂಡು, ಈ ಪ್ರಕರಣದ ಮಾಹಿತಿಯನ್ನು ನೀಡಿ, ಠಾಣೆಯಲ್ಲಿದ್ದ ಆರೋಪಿ ಏನನ್ನಾ ತೋರಿಸಿಕೊಡುತ್ತಾನೋ ಆ ಸಮಯ ನೀವು ಪಂಚರಾಗಿ ಹಾಜರಿರುವಂತೆ ಕೇಳಿಕೊಂಡಿದ್ದು ಅದರಂತೆ ನಾವು ಒಪ್ಪಿಕೊಂಡ ಮೇರೆಗೆ ಆರೋಪಿ ಹಾಗೂ ಪೋಲಿಸರ ಜೊತೆನಾವು ಇಲಾಖಾ ಜೀಪಿನಲ್ಲಿ ಸಂಜೆ 4.30 ಗಂಟೆಗೆ

ಕುಳಿತುಕೊಂಡಾಗ ಆರೋಪಿ ತಿಳಿಸಿದಂತೆ ಬೆಳ್ತಂಗಡಿ ಠಾಣೆಯಿಂದ ಹೊರಟು ಉಜಿರೆ ಕಡೆಗೆ ಹೋಗುವ ರಸ್ತೆಯಲ್ಲಿ ಹೋಗುತ್ತಿರುವಾಗ ಆರೋಪಿ ಲಾಯಿಲದಿಂದ ಸ್ವಲ್ಪ ಮುಂದೆ ಹೋದಾಗ ಬಲಕೆಡೆಗೆ ಅಂದರೆ ಕೊಯ್ಯಾರು ಕಡೆಗೆ ಹೋಗುವ ರಸ್ತೆಯಲ್ಲಿ ಹೋಗುವರೆ ತಿಳಿಸಿದಂತೆ, ಮುಂದೆ ಹೋಗುತ್ತಾ ಕೊಯ್ಯೂರಿನಿಂದ ಸ್ವಲ್ಪ ಮುಂದಕ್ಕೆ ಮೈಂದಕೋಡಿ ಎಂಬಲ್ಲಿಗೆ ಸಂಜೆ 5 ಗಂಟೆಗೆ ತಲುಪಿದಾಗ ಆರೋಪಿ ಜೀಪು ನಿಲ್ಲಿಸಲು ಸೂಚಿಸಿದಂತೆ ಜೀಪನ್ನು ನಿಲ್ಲಿಸಲಾಗಿ ಆರೋಪಿ ಜೀಪಿನಿಂದ ಇಳಿದು ಮುಂದೆ ಹೋಗುವಾಗ ನಾವು ಪೋಲಿಸರ ಜೊತೆ ಹಿಂಬಾಲಿಸಿದಾಗ ರಸ್ತೆಯ ಬದಿ ಸ್ವಲ್ಪ ಬಲಕಡೆಗೆ ಸ್ವಲ್ಪ ಎತ್ತರದಲ್ಲಿ ಸುಮಾರು 50 ಅಡಿ ದೂರದಲ್ಲಿರುವ ಶೀಟ್ ಹಾಕಿದ ಮನೆಗೆ ಕರೆದುಕೊಂಡು ಹೋಗಿ ಇದೆ ಮನೆಯಲ್ಲಿ ಚಾಸಾ-1 ರವರೊಂದಿಗೆ ವಾಸವಾಗಿರುವುದಾಗಿ ಆರೋಪಿ ತಿಳಿಸಿದ್ದು ಸದರಿ ಮನೆಯ ಬೆಡ್ ರೂಮಿನಲ್ಲಿ ದಿನಾಂಕ 28.06.2024 ರಂದು ಗಲಾಟೆಯಾಗಿರುವುದಾಗಿ ತಿಳಿಸಿ ಸದರಿ ಬೆಡ್ ರೂಮನ್ನು ತೋರಿಸಿ ನಂತರ ಅಡುಗೆ ಕೋಣೆಯ ಹಲಗೆಯ ಮೇಲೆ ಪ್ಲಾಸ್ಟಿಕ್ ಟಬ್ ಒಂದನ್ನು ಮುಚ್ಚಿಟ್ಟಿರುವುದನ್ನು ತೆಗೆದು ಅದರ ಒಳಗೆ ಇದ್ದ ಎಂ.ಒ-9 ರ ಕತ್ತಿಯನ್ನು ತೋರಿಸಿ ತೆಗೆದು ಹಾಜರುಪಡಿಸಿ ಇದೇ ಕತ್ತಿಯಿಂದ ಚಾಸಾ-1 ರವರ ಬಟ್ಟೆಗಳನ್ನು ಹರಿದು ಆಕೆ ಕೈ ಮತ್ತು ಕಾಲುಗಳಿಗೆ ಬರೆ ಹಾಕಿರುವುದಾಗಿ ಆರೋಪಿಯು ತಿಳಿಸಿ, ಹಾಜರುಪಡಿಸಿದ್ದು, ಸದರಿ ಕತ್ತಿಯನ್ನು ನಮ್ಮ ಸಮಕ್ಷಮ ಹಸಿರು ಬಣ್ಣದ ಕವರಿನಲ್ಲಿ ಹಾಕಿ ಅರಗು ಸೀಲು ಹಾಕಿ ವಶಪಡಿಸಿಕೊಂಡಿರುತ್ತಾರೆಂದರೆ ಸರಿಯಲ್ಲ. ನಾನು ಈ ಬಗ್ಗೆ ಪೊಲೀಸರು ತಯಾರಿಸಿದ ನಿಪಿ-11 ರ ಸ್ವತ್ತು ಸ್ವಾಧೀನತಾ ಮಹಜರಿಗೆ ಅದರಲ್ಲಿ ಬರೆದಿರುವ ವಿಚಾರವನ್ನು ತಿಳಿದು ಸಹಿ ಮಾಡಿರುತ್ತೇನೆಂದರೆ

ಸರಿಯಲ್ಲ. ನಾನು ಅದೇ ದಿನ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದ ಕಾರಣ ಸದರಿ ಹೇಳಿಕೆಯನ್ನು **ನಿ.ಪಿ.13** ಎಂದು ಗುರುತಿಸಲಾಯಿತು.

5. ಚಾಸಾ-1 ಮತ್ತು ಆರೋಪಿಯು ರಾಜಿ ಮಾಡಿಕೊಂಡು, ಈಗ ಒಟ್ಟಾಗಿ ಜೀವನ ನಡೆಸುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆ ಬಗ್ಗೆ ನನಗೆ ಗೊತ್ತಿದ್ದರೂ, ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ವಿ.ಆರ್.ಎ. ವಕೀಲರಿಂದಃ**

ಆರೋಪಿ ಪರ ವಕೀಲರು ಈ ಸಾಕ್ಷಿಯ ಪಾಟೀ ಸವಾಲು ಇರುವುದಿಲ್ಲ ಎಂದು ನುಡಿದಿರುತ್ತಾರೆ.

**ಮರುವಿಚಾರಣೆಃ** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ., ಮಂಗಳೂರು.